ಕಥೆ



# ಒಲವಿನ ಓಲೆ

■ ಚಂದ್ರು ಆರ್. ಪಾಟೀಲ್

**ಹಾಯ್ ಚೈತ್ರ,**

ಮನಸ್ಸು ಭಾವನೆಗಳಿಂದ ತುಂಬಿ ಹೋದರೆ ಅದನ್ನು ಕಕ್ಕದೆ ನಿರಾಳವಾಗುವದು ನನ್ನಂಥ ಭಾವುಕನಿಗೆ ಆಗದ ಮಾತು; ಅದಕ್ಕೆ ಒಳಗಿನದೆಲ್ಲವನ್ನು ಚೆಲ್ಲಿ ನಿರಾಳವಾಗಬೇಕೆಂದಿದ್ದೇನೆ.

ಇಂಥ ದುಗುಡ, ಚಡಪಡಿಕೆಯ ನಡುವೆಯೂ ನಿನ್ನ ಬಗೆಗೆ ಮಾತಾಡುವುದೆಂದರೆ ಏನೋ ಒಂದು ಉತ್ಸಾಹ. ಅದಕ್ಕೆ ನಾನು ಅಂದುಕೊಳ್ಳೋದು ನೀನೊಂದು ಮಾಯೆ! ಮೊದಮೊದಲು ನಿನ್ನ ಕಂಡಾಗ ತೇಲುವ ಮೋಡಗಳಲ್ಲಿ ನಾನೊಂದು ಮೋಡವಾಗಿದ್ದೆ. ನನ್ನ ಕಂಗಳಿನ ಅಂಗಳದಲ್ಲಿ ನಿನ್ನ ಬೆಳದಿಂಗಳ ರೂಪ ಚೆಲ್ಲಿ ಇಡೀ ದುನಿಯ ಮೆರುಗಾಗಿ ಕಾಣುತ್ತಿತ್ತು. ಆ ನಿನ್ನ ನಡೆನುಡಿಯ ನೆನಪು, ನಿನ್ನ ಬದುಕು ಭಾವದ ಹಿಂದಿನ ನೂರೆಂಟು ಕುತೂಹಲಗಳು, ಮೀನಿನ ಹೆಜ್ಜೆ ಹುಡುಕುವ ಹುಚ್ಚು ಸಾಹಸಕ್ಕೆ ಪ್ರೇರಣೆಯಾಗಿದ್ದವು. ಜಗದಗಲ ಬದುಕ ಕಡಲ ತುತ್ತ ತುದಿಯ ತೀರದಲ್ಲಿ ನಿನ್ನ ತುಂಬಿಕೊಳ್ಳಲು ಕಾತುರದಿ ಕಾದು ಕುಳಿತ ಪುಟ್ಟ ದೋಣಿಯಾಗಿತ್ತು ಈ ಹೃದಯ. ಎಲ್ಲವನ್ನು ಮರೆತು ನಿನ್ನ ಕುರಿತೇ ಯೋಚಿಸುವ ಮನಕೆಲ್ಲಿ ಮನವರಿಕೆ..!

ಮೊದಮೊದಲು ಕಡು ಚಳಿಗಾಲದ ಮುಂಜಾವಿನ ಮುಸುಕಿನಲಿ ನದಿಯ ಒಡಲಿಗೆ ಈಜಲು ಇಳಿದವನಂತೆ ಹೆದರುತ್ತಲೊ, ನಡುಗುತ್ತಲೊ ನಿನ್ನ ಸ್ನೇಹದಾಳಕ್ಕೆ ಇಳಿದೆ. ‘ಎಂತಹ ಹದವಿತ್ತು ಹರೆಯಕೆ, ಏನೀ ಮುದವಿತ್ತು’ ಗೆಳತಿ ನಿನ್ನ ಸ್ನೇಹದ ಹರಿಯುವಿಕೆಯಲ್ಲಿ, ಹೊರಳುವಿಕೆಯಲ್ಲಿ ನನಗಂತೂ ಹೊರಬರಲು ಕಿಂಚಿತ್ತು ಇಷ್ಟವಿಲ್ಲ. ಈಗಲೂ ಈಜುತ್ತಿದ್ದೇನೆ. ಅಯ್ಯೋ! ಏನೇನೋ ಹೇಳುತ್ತಿರುವೆಯಲ್ಲ ಎಂದು ಕೋಪ ಮಾಡಿಕೊಳ್ಳಬೇಡ. ನನಗೆ ಗೊತ್ತು ನಿನಗೆ ಏನೂ ಅರ್ಥವಾಗಲ್ಲ ಅಂತ. ಹಾಗಂತ ನೀನು ತುಂಬಾ ಮುಗುದೆಯಂತಲೂ ನಾನು ಹೇಳುವುದಿಲ್ಲ. ಯಾಕೋ ನನಗೆ ನೇರವಾಗಿ, ಸರಳವಾಗಿ, ಸಂಕ್ಷಿಪ್ತವಾಗಿ ಎಲ್ಲಕ್ಕಿಂತ ಮಿಗಿಲಾಗಿ ಧೈರ್ಯವಾಗಿ ಹೇಗೆ ಹೇಳುವುದು ತಿಳಿಯುತ್ತಿಲ್ಲ. ಒಳಗೊಳಗೆ ಏನೋ ಗುದ್ದಾಟ, ಸಂಕಟ, ಅಸಹಾಯಕತೆ. ನೇರ ಮಾತಿಗೆ ಬರಲು ಬೆದರುತ್ತಿರುವ ಭಾವ. ಅದೇಕೋ ಜೀವ ಹಸಿದು ಕುಸಿದು ಹೋದ ಕರು ಕೆಚ್ಚಲಿಗೆ ಮೂತಿ ಇಕ್ಕಲೂ ಸತುವು ಇಲ್ಲದೆ ದಡಬಡಿಸಿದಂತಿದೆ. ಅತ್ತು ಕರೆದರೂ ಕಾಣದ ತಾಯಿಯ ಮೊರೆಗೆ ಮಡುಗಟ್ಟಿದ ದುಃಖ ಕಟ್ಟೆಯೊಡೆದ ಕಂದನ ಚೀತ್ಕಾರದಂತಿದೆ. ಅದೇನೇ ಇದ್ದರೂ ಇಂದು ಹೇಳಲೇಬೇಕೆಂದು ದೃಢ ನಿರ್ಧಾರ ಮಾಡಿಯೇ ಈ ಓಲೆ ಬರಿಯುತ್ತಿದ್ದೇನೆ.

ನಿನ್ನ ಸ್ನೇಹದ ಕಡಲಲಿ ನೆಮ್ಮದಿಯಾಗಿ ಈಜುತ್ತಿದ್ದವನಿಗೆ ಈಗ ದಡ ಸೇರುವ ಗುರಿ ಹುಟ್ಟಿದೆ. ಆಗಲೇ ಅದಕ್ಕೊಂದು ಅರ್ಥ ಎಂಬಂತೆ ಮನಸ್ಸು ಕನಸು ಕಾಣುತ್ತಿದೆ. ಅದು ಸುಲಭವೋ..? ಕಾಠಿಣ್ಯವೋ..? ನೀನೆ ಈ ಸಮಸ್ಯೆಯನ್ನು